**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ ಸಿ ನಂ. 693/2023**

ಫಿರ್ಯಾದುದಾರರು : ಗುಂಡ್ಲುಪೇಟೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿ : ಯಮ್ಸೀದ್ ಎಂ.ಎಂ ಬಿನ್ ಮೊಹಮ್ಮದ್, 38 ವರ್ಷ,
ವಾಸಃ ಮುತ್ತೂಕು, ಕುನ್ನಮಲ್ ಹೌಸ್,
ಪುದುಪ್ಪಾಡಿ ಪೋಸ್ಟ್, ಕಲ್ಲಿಕೋಟೆ, ಕೇರಳ.

**ಆರೋಪಣೆ**

ಶ್ರೀ ಬಸವರಾಜ ತಳವಾರ. ಬಿಎ., ಎಲ್ ಎಲ್ ಬಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ಗಳು, ಗುಂಡ್ಲುಪೇಟೆ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿನಾಂಕ 07.07.2023 ರಂದು ಬೆಳಗ್ಗೆ ಸುಮಾರು 7.15 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗುಂಡ್ಲುಪೇಟೆ ಪಟ್ಟಣದ ಕೇರಳ–ಗುಂಡ್ಲುಪೇಟೆ ರಾಷ್ಟ್ರೀಯ ಹೆದ್ದಾರಿಯ ಮುಖ್ಯ ರಸ್ತೆಯಲ್ಲಿ ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯ ಬಳಿಯ ಊಟಿ ಸರ್ಕಲ್ ನಲ್ಲಿನ ತಿರುವಿನಲ್ಲಿ ನಿಸಾರ್ ಅಹಮ್ಮದ್ ಗುಂಡ್ಲುಪೇಟೆಯ ಐ.ಬಿ. ಸರ್ಕಲ್ ಗೆ ಬರಲು ಊಟಿ ಸರ್ಕಲ್ ನ ಕ್ರಾಸ್ ನಲ್ಲಿ ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಕೇರಳ ಕಡೆಯಿಂದ ಗುಂಡ್ಲುಪೇಟೆ ಕಡೆಗೆ ಕೆಎಲ್–76–ಬಿ–2782 ರ ಲಾರಿಯನ್ನು ಆರೋಪಿಯಾದ ನೀವು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಲಾರಿಯನ್ನು ಊಟಿ ಸರ್ಕಲ್ ನ ತಿರುವಿನಲ್ಲಿ ಮೈಸೂರು ರಸ್ತೆ ಕಡೆಗೆ ತಿರುಗಿಸಲು ಸಾಕಷ್ಟು ಸ್ಥಳಾವಕಾಶವಿದ್ದರೂ ಸಹ ಅಜಾಗರೂಕತೆಯಿಂದ ತಿರುಗಿಸಿ ರಸ್ತೆಯ ಎಡಬದಿಯಲ್ಲಿ ಹೋಗುತ್ತಿದ್ದ ನಿಸಾರ್ ಅಹಮ್ಮದ್ ರವರಿಗೆ ಹಿಂದಿನಿಂದ ಡಿಕ್ಕಿ ಮಾಡಿ ಲಾರಿಯ ಹಿಂಬದಿಯ ಎಡ ಚಕ್ರವು ನಿಸಾರ್ ಅಹಮದ್ ರವರ ಎರಡೂ ಕಾಲುಗಳ ಮೇಲೆ ಹರಿದು ಎರಡೂ ಕಾಲುಗಳಿಗೆ ಮತ್ತು ಎಡಕೈಗೆ ತೀವ್ರ ಸ್ವರೂಪದ ಗಾಯವಾಗಿದ್ದು, ಆ ಮೂಲಕ ಭಾ ದಂ ಸಂ ಕಲಂ 279 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ತೀವ್ರಸ್ವರೂಪದ ನೋವುಂಟಾಗಿದ್ದ ನಿಸಾರ್ ಅಹಮ್ಮದ್ ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಕೆ.ಆರ್.ಆಸ್ಪತ್ರೆಗೆ ಸೇರಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಕೆಎಲ್–76–ಬಿ–2782 ರ ಲಾರಿ ಚಾಲಕ ಮಾಡಿದ್ದ ಅಪಘಾತದಿಂದುಂಟಾದ ತೀವ್ರ ಗಾಯಗಳಿಂದ ದಿಃ 07.07.2023 ರಂದು ಸುಮಾರು ಬೆಳಗ್ಗೆ 11.45 ಗಂಟೆಯಲ್ಲಿ ಕೆ.ಆರ್.ಆಸ್ಪತ್ರೆಯಲ್ಲಿ

ಮೃತಪಟ್ಟಿದ್ದು,  ಆರೋಪಿಯಾದ ನೀವು ಆ ಮೂಲಕ  ಭಾ ದಂ ಸಂ ಕಲಂ 304(ಎ) ರಡಿಯಲ್ಲಿ ದಂಡನೀಯ ಅಪರಾಧವನ್ನು  ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ  ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ, ಈ ನಾಯಾಲಯದ ವಿಚಾಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸಲಾಗಿದೆ.

ದಿನಾಂಕಃ 04.07.2024

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ವ ನ್ಯಾ ದಂ.
ಗುಂಡ್ಲುಪೇಟೆ.